## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1217**
2. ಸದಸ್ಯರ ಹೆಸರು : ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : **23-12-2021**
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇತ್ತೀಚೆಗೆ ಎ.ಸಿ.ಬಿ. ದಾಳಿ ನಡೆದಿದೆಯೇ; ಹಾಗಿದ್ದಲ್ಲಿ, ಕೇಂದ್ರ ಕಚೇರಿ ಸೇರಿದಂತೆ ಇತರೆ ಯಾವ ಯಾವ ಬಿಡಿಎ ಕಚೇರಿಗಳ ಮೇಲೆ ದಾಳಿ ನಡೆದಿದೆ; ಯಾವ ದಿನಾಂಕದಂದು ನಡೆದಿದೆ; | • ದಿನಾಂಕ: 19.11.2021 ಭ್ರಷ್ಟಾಚಾರ ನಿಗ್ರಹ ದಳದ ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯ ವಿವಿಧ ವಿಭಾಗಗಳ ಕಛೇರಿಯಲ್ಲಿ ಶೋಧನೆಯನ್ನು ಕೈಗೊಳ್ಳಲಾಗಿರುತ್ತದೆ.<br>• ದಿನಾಂಕ: 20.11.2021 ರಂದು ಸಹ ಕೇಂದ್ರ ಕಛೇರಿಯಲ್ಲಿ ಶೋಧನೆಯನ್ನು ಮುಂದುವರೆಸಲಾಗಿರುತ್ತದೆ.<br>• ದಿನಾಂಕ: 23.11.2021 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಕಛೇರಿ, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು, ದಕ್ಷಿಣ ವಿಭಾಗದ ಕಾರ್ಯಪಾಲಕ ಅಭಿಯಂತರರು ಕಛೇರಿ, ಬನಶಂಕರಿ, ಬೆಂಗಳೂರು, ಕಾರ್ಯಪಾಲಕ ಅಭಿಯಂತರರ ಕಛೇರಿ ಪಶ್ಚಿಮ ವಿಭಾಗ, ವಿಜಯನಗರ, ಬೆಂಗಳೂರು, ಹಾಗೂ, ಕಾರ್ಯಪಾಲಕ ಅಭಿಯಂತರರು ಉತ್ತರ ವಿಭಾಗ, ಆರ್.ಟಿ.ನಗರ, ಬೆಂಗಳೂರು ಈ ಕಛೇರಿಯಲ್ಲಿ ಶೋಧನೆಯನ್ನು ನಡೆಸಲಾಗಿರುತ್ತದೆ. |
| ಆ) | ದಾಳಿ ಪ್ರಕರಣದಲ್ಲಿ ಆರೋಪಿತರಾಗಿರುವ ಅಧಿಕಾರಿ/ನೌಕರರುಗಳು ಯಾರು ಯಾರು; (ಹೆಸರು ಮತ್ತು ಹುದ್ದೆವಾರು ವಿವರ ನೀಡುವುದು) | ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 55/2021 ಕಲಂ. 7(ಎ) , 7(ಬಿ) , 8,12,13(1)(ಎ) ರೆ/ವಿ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು |

| | | |
|---|---|---|
| | | ಕೈಗೊಳ್ಳಲಾಗಿದೆ. ಬಿಡಿಎಯ ಕಛೇರಿಯಲ್ಲಿನ ಶೋಧನೆಯ ನಂತರದಲ್ಲಿ ದೊರೆತ ಕಡತ/ದಾಖಲಾತಿಗಳನ್ನು ಪರಿಶೀಲಿಸಿ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ ಕಲಂ. 17ಎ ಅಡಿಯಲ್ಲಿ ತನಿಖೆ/ವಿಚಾರಣೆ ನಡೆಸಲು ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ವ್ಯವಹರಿಸಲಾಗಿದೆ. ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ನಂತರ ಪ್ರಕರಣ ದಾಖಲಿಸುವ ಕುರಿತಂತೆ ಕ್ರಮ ವಹಿಸಲಾಗುವುದು. |
| ಇ) | ದಾಳಿ ಪ್ರಕರಣದಲ್ಲಿ ಆರೋಪಿತರಾಗಿರುವ ಅಧಿಕಾರಿ/ನೌಕರರುಗಳು ಎಸಗಿರುವ ಆರೋಪಗಳೇನು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಶೋಧನೆ ನಡೆಸಲಾಗಿ, ಶೋಧನಾ ಕಾಲದಲ್ಲಿ ಕಡತ/ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಅಕ್ರಮವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತವೆ.<br>• ಶೋಧನೆಯ ಸಮಯದಲ್ಲಿ ಬೆಂಗಳೂರು ನಗರದಲ್ಲಿ ಬಿಡಿಎ ನಿಂದ ನಿರ್ಮಾಣವಾಗುತ್ತಿರುವ ಕೆಲವು ಬಡಾವಣೆಗಳಲ್ಲಿ ಅರ್ಹತೆ ಇಲ್ಲದಿದ್ದರೂ ಸಹ ನಿವೇಶನಗಳನ್ನು ಹಂಚಿಕೆ ಮಾಡಿರುವುದು.<br>• ಒಂದೇ ನಿವೇಶನವನ್ನು ಹಲವರಿಗೆ ಹಂಚಿಕೆ ಮಾಡಿರುವುದು.<br>• ಬದಲೀ ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡುವುದು.<br>• ದಾಖಲಾತಿಗಳನ್ನು ತಿದ್ದಿ ಅಕ್ರಮ ಎಸಗಿರುವುದು.<br>• ಸಿ.ಎ. ನಿವೇಶನಗಳನ್ನು ಹಾಗೂ ಕಾರ್ನರ್ ಸೈಟ್(ಮೂಲೆ ನಿವೇಶನ) ಹಂಚಿಕೆ ನಿಯಮ ಉಲ್ಲಂಘನೆ ಮಾಡಿ ಅವ್ಯವಹಾರವೆಸಗಿರುವುದು ಕಂಡುಬಂದಿರುತ್ತದೆ<br>• ಸರ್ಕಾರದಿಂದ ನೋಟಿಫೈ ಆಗಿರುವ ಜಮೀನಿನಲ್ಲಿ ನಕಲಿ ವಾರಸುದಾರರನ್ನು ಸೃಷ್ಟಿಸಿ ಅವರಿಗೆ ಸರ್ಕಾರದಿಂದ ನಗದು/ಸೈಟನ್ನು ಕಾನೂನು |



Generated from eOffice by G JAGADEESHA, CMO-JS(GJ), JOINT SECREATRY, CMO on 21/12/2021 06:43 PM

| | | |
|---|---|---|
| | | ಬಾಹಿರವಾಗಿ ಪರಿಹಾರ ಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. |
| ಈ) | ಸದರಿ ಆರೋಪಿತರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆಯೇ; ಪ್ರಾಧಿಕಾರದ ವತಿಯಿಂದ ದಾಳಿ ನಡೆದ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ; (ಹಾಗಿದ್ದಲ್ಲಿ ಕೈಗೊಂಡ ಕ್ರಮಗಳ ವಿವರ ನೀಡುವುದು) | ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:55/2021 ಕಲಂ. 7(ಎ) , 7(ಬಿ) , 8,12,13(1)(ಎ) ರ/ವಿ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ. ಆರೋಪಿತರ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988 ಕಲಂ. 17ಎ ಅಡಿಯಲ್ಲಿ ಪೂರ್ವಾನುಮತಿ ನೀಡುವಂತೆ ಆಪಾದಿತ ಅಧಿಕಾರಿಗಳ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆ. |

**ಸಂಖ್ಯೆ: ಸಿಆಸುಇ 78 ಎಸಿಬಿ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ